ಓ ಎಸ್ ನಂ.19/2024

ಡಿ.ಡಬ್ಲ್ಯು-1 ಗಫೂರ ತಂದೆ ರಾಜಅಹಮದ ಪಟೇಲ

**(ಇಂದು ದಿನಾಂಕಃ 08-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ನನ್ನ ಮುತ್ತಜ್ಜನ ಹೆಸರು ಲಾಡ್ಲೆಸಾಬ ಆಗಿರುತ್ತದೆ. ಲಾಡ್ಲೆಸಾಬರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ದಸ್ತಗೀರಸಾಬ ಮತ್ತು ಬುರಾನಸಾಬರವರು ಲಾಡ್ಲೆಸಾಬರವರು ಮಕ್ಕಳು ಎಂದರೆ ಸರಿ. ದಸ್ತಗೀರಸಾಬರವರಿಗೆ ಜಾಫರಸಾಬ ಮತ್ತು ರಾಜಅಹಮದ ಎಂಬ ೨ ಜನ ಮಕ್ಕಳು ಎಂದರೆ ಸರಿ. ಜಾಫರಸಾಬರವರು ಯಾವುದೆ ಸಂತಾನ ಇಲ್ಲದೆ ಮೃತರಾಗಿರುತ್ತಾರೆ ಎಂದರೆ ಸರಿ. ರಾಜಅಹಮದರವರಿಗೆ ಪ್ರತಿವಾದಿಗಳಾದ ನಾವು ೭ ಜನ ಮಕ್ಕಳಿರುತ್ತೇವೆ ಎಂದರೆ ಸರಿ.

೨. ಬುರಾನಸಾಬರವರಿಗೆ ಇಬ್ರಾಹಿಂ, ಅಲ್ಲಾಹುದ್ದೀನ್ ಮತ್ತು ಕರೀಮಸಾಬ ಎಂಬ ೩ ಜನ ಮಕ್ಕಳು ಎಂದರೆ ಸರಿ. ೧ನೇ ಪ್ರತಿವಾದಿ ಇಬ್ರಾಹಿಂರವರ ಹೆಂಡತಿ ಎಂದರೆ ಸರಿ. ಇಬ್ರಾಹಿಂರವರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ಅಬ್ದುಲಕರೀಮ ಕೂಡಾ ಮೃತರಾಗಿರುತ್ತಾರೆ ಎಂದರೆ ಸರಿ. ವಾದಿ ನಂಬರ ೨ ಅಲ್ಲಾಹುದ್ದೀನರವರು ಜೀವಿತಾ ಇರುತ್ತಾರೆ. ೩ನೇ ವಾದಿ ಅಬ್ದುಲಕರೀಮರವರ ಹೆಂಡತಿ ಎಂದರೆ ಸರಿ. ಅಬ್ದುಲಕರೀಮರವರಿಗೆ ಬುರಾನ ಮತ್ತು ಮಂಜೂರ ಎಂಬ ೨ ಜನ ಮಕ್ಕಳು ಇರುತ್ತಾರೆ ಎಂದರೆ ಸರಿ.

೩. ದಾವಾ ಜಮೀನಿನ ಸರ್ವೆ ನಂಬರ ೧ ಇರುತ್ತದೆ. ದಸ್ತಗೀರಸಾಬ ಮತ್ತು ಬುರಾನಸಾಬರವರು ತಮ್ಮ ಜೀವಿತಾ ಕಾಲದಲ್ಲಿಯೆ ಅವರು ಬೇರೆ ಆಗಿದ್ದರು ಎಂದರೆ ಸರಿ. ದಸ್ತಗೀರಸಾಬರವರಿಗೆ ೧೪ ಎಕರೆ ೩ ಗುಂಟೆ ಮತ್ತು ಬುರಾನಸಾಬರವರಿಗೆ ೧೪ ಎಕರೆ ೩ ಗುಂಟೆ ಜಮೀನು ಪಾಲಿಗೆ ಬಂದಿತ್ತು ಎಂದರೆ ಸರಿ. ನಮ್ಮ ತಂದೆ ರಾಜಅಹಮದರವರು ಸದರಿ ದಸ್ತಗೀರಸಾಭರವರ ಪಾಲಿಗೆ ಬಂದ ೧೪ ಎಕರೆ ೩ ಗುಂಟೆ ಜಮೀನಿನಲ್ಲಿ ೮ ಎಕರೆ ೨೫ ಗುಂಟೆ ಜಮೀನನ್ನು ಶಾಂತಪ್ಪ ತಂದೆ ಬಸವಂತಪ್ಪ ಪಾಟೀಲ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

೪. ಬುರಾನಸಾಬರವರು ತಮ್ಮ ಪಾಲಿನ ೧೪ ಎಕರೆ ೩ ಗುಂಟೆ ಜಮೀನಿನಲ್ಲಿ ೪ ಎಕರೆ ಜಮೀನನ್ನು ಮಲ್ಲಪ್ಪ ತಂದೆ ಭೀಮಣ್ಣ ಹೂಗಾರ ಯಾನೆ ಫುಲಾರಿರವರಿಗೆ ಮಾರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಲ್ಲಪ್ಪರವರ ತಂದೆಯಾದ ಭೀಮಣ್ಣರವರಿಗೆ ಕಲ್ಲಪ್ಪ ಎಂದೂ ಕೂಡಾ ಕರೆಯುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ರಾಜಅಹಮದರವರು ೮ ಎಕರೆ ೨೫ ಗುಂಟೆ ಜಮೀನು ಮಾರಾಟ ಮಾಡಿದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣನಾದ ೧ನೇ ಪ್ರತಿವಾದಿ ಈ ದಾವೆಗೆ ತಕರಾರು ಸಲ್ಲಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.